ಸಿ.ಸಿ ನಂಬ್ರಃ 658/2023
ಪಿ.ಡಬ್ಲ್ಯೂ ಃ 1

ದಿನಾಂಕಃ 25 -01-2025 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಗಿದೆ

ಪಾಟೀ ಸವಾಲು : ಆರೋಪಿ ಪರ ಶ್ರೀ ಆರ್. ಕೆ ಎಮ್ ವಕೀಲರಿಂದ

1. ಈ ಹೋಟೆಲ್ ಮಾರಾಟ ಮಾಡುವ ಪೂರ್ವದಲ್ಲಿ ಬೇರೆ ಹೋಟೆಲ್ ನ್ನು ನಡೆಸಿರುತ್ತೇನೆ. ಹೋಟೆಲ್ ನ್ನು ಮಾರಾಟ ಮಾಡುವಾಗ 56 ವರ್ಷ ಆಗಿತ್ತು. ನಾನು ನನ್ನ 13 ನೇ ವಯಸ್ಸಿನಲ್ಲಿ ಹೋಟೆಲ್ ಕೆಲಸ ಮಾಡುತ್ತಿದ್ದೆ. 2016 ರಲ್ಲಿ ನಾನು ಸ್ವಂತವಾಗಿ ಹೋಟೆಲ್ ತೆಗೆದಿರುತ್ತೇನೆ. ಆಗ ನನಗೆ ನನ್ನ ವಯಸ್ಸು ಎಷ್ಟು ಎಂದು ನೆನಪಿರುವುದಿಲ್ಲ. ಗಂದರ್ವ ಹೋಟೆಲ್ ನ್ನು ಮಾರಾಟ ಮಾಡುವ ಪೂರ್ವದಲ್ಲಿ ಹೋಟೆಲ್ ಡಿಪ್ಲೋಮೇಟ್ ನ್ನು ಸಹ ನಡೆಸುತ್ತಿದ್ದೆ. ಡಿಪ್ಲೋಮೇಟ್ ಹೋಟೆಲ್‌ನ್ನು ಬಿಟ್ಟ ಮೇಲೆ ಗಂದರ್ವ ಹೋಟೆಲ್ ಪ್ರಾರಂಭಸಿರುತ್ತೇನೆ. ಈ ಹಿಂದೆ ಸ್ಥಿರಾಸ್ತಿ ಖರೀದಿಸಿ ಮಾರಾಟ ಮಾಡಿರುವ ಅನುಭವ ಇರುವುದಿಲ್ಲ.

2. ಗಂದರ್ವ ಹೋಟೆಲ್ ಗೆ ಸಂಬಂಧಪಟ್ಟಂತೆ ಅಬಕಾರಿ ಇಲಾಖೆಗೆ CL 7 ರಂತೆ ಪರವಾನಿಗೆ ಪಡೆದುಕೊಂಡಿರುತ್ತೇನೆ. ನಾನು ಮಾರಾಟ ಮಾಡಿದಂತಹ ಗಂದರ್ವ ಹೋಟೆಲ್ ನಲ್ಲಿ 20 ವಸತಿ ಗೃಹ, ಮ್ಯಾರೇಜ್ ಹಾಲ್ ಹಾಗೂ ಬಾರ್ ಆ್ಯಂಡ್ ರೆಸ್ಟೋರೆಂಟ್ ಹಾಗೂ ಪೀಠೋಪಕರಣಗಳು ಇರುತ್ತವೆ. ಈಗ CL 7 ನ್ನು ನನ್ನ ಹೆಸರಿನಿಂದ ಆರೋಪಿಯ ಹೆಸರಿಗೆ ವರ್ಗಾಯಿಸಲಾಗಿದೆ. ದಿನಾಂಕ 27-01-2023 ಕ್ಕೆ ಅವರಿಗೆ ಸೇಲ್ ಡೀಡ್ ಮಾಡಿ ಕೊಡಲಾಗಿರುತ್ತದೆ. ಸೇಲ್ ಡೀಡ್ ನಲ್ಲಿ ಕ್ರಯದ ಪ್ರತಿಫಲ ಎಂದು 4 ಕೋಟಿ 40 ಲಕ್ಷ ನಮೂದಿಸಲಾಗಿತ್ತು. ಸಂತೋಷ ಕುಮಾರ್ ಶೆಟ್ಟಿಯವರು ಕ್ರಯ ಪತ್ರ ಬರೆದಿರುತ್ತಾರೆ. ನಾನು ಕ್ರಯ ಪತ್ರ ಓದಿ ನೋಡಿರುತ್ತೇನೆ. ಅದು ಕನ್ನಡ ಭಾಷೆಯಲ್ಲಿರುತ್ತದೆ. ಅದರಲ್ಲಿ 4 ಕೋಟಿ 40 ಲಕ್ಷ ನನಗೆ ಸಂದಾಯವಾಗಿರುವ ಬಗ್ಗೆ ನಮೂದಿಸಲಾಗಿರುತ್ತದೆ.

3. 4 ಕೋಟಿ 40 ಲಕ್ಷವನ್ನು ಆರೋಪಿತಳು ನನಗೆ ಬ್ಯಾಂಕ್‌ನ ಮುಖಾಂತರ ವರ್ಗಾಯಿಸಲಾಗಿದೆ. ಹಣವನ್ನು ಕ್ರಯ ಪತ್ರವಾಗುವ ಪೂರ್ವದಲ್ಲಿ ವರ್ಗಾವಣೆ ಮಾಡಿರುತ್ತಾರೆ. ದಿನಾಂಕ 27-01-2023 ಕ್ರಯ ಪತ್ರ ಆಗುವ ಪೂರ್ವದ 1 ವಾರದಲ್ಲಿ ಕ್ರಯ ಪತ್ರಕ್ಕೆ ಮಾಹಿತಿ ಕೊಟ್ಟಿರಬಹುದು. ಆದರೆ ಈಗ ನೆನಪಿರುವುದಿಲ್ಲ. ಕ್ರಯ ಪತ್ರಕ್ಕೆ ನವೀನಚಂದ್ರ ಶೆಟ್ಟಿಯವರು ಹಾಗೂ ಶೇಖರ ಶೆಟ್ಟಿಯವರು ಸಾಕ್ಷಿಯಾಗಿದ್ದಾರೆ. ಕ್ರಯ ಪತ್ರ ಸಿದ್ದ ಮಾಡುವಾಗ ಹಾಗೂ ಕ್ರಯ ಪತ್ರ ನೋಂದಣಿ ಮಾಡುವ ಪೂರ್ವದಲ್ಲಿ ಓದಿ ನೋಡಿರುತ್ತೇನೆ.

ಕ್ರಯ ಪತ್ರದ ಪ್ರತಿಯನ್ನು ಇಟ್ಟುಕೊಂಡಿರುತ್ತೇನೆ. ಕ್ರಯ ಪತ್ರದ ಶೀರ್ಷಿಕೆ ಈಗ ನನಗೆ ನೆನಪಾಗುತ್ತಿಲ್ಲ. 6 ಕೋಟಿ 70 ಲಕ್ಷಕ್ಕೆ ನಾನು ಕರಾರು ಪತ್ರ ಮಾಡಿಕೊಂಡಿರುತ್ತೇನೆ.

4. 6 ಕೋಟಿ 70 ಲಕ್ಷದ ಕರಾರು ಪತ್ರದಲ್ಲಿ ಸಂಪೂರ್ಣ ಕಟ್ಟಡವನ್ನು ಮಾರಾಟ ಮಾಡುವುದಾಗಿ ನಮೂದಿಸಲಾಗಿರುತ್ತದೆ. ದಿನಾಂಕ 27-01-2023 ರಂದು ಕ್ರಯ ಬರೆದು ಕೊಟ್ಟ ನಂತರ ಅದೇ ದಿನ ಆರೋಪಿತಳು ಇನ್ನೊಂದು ಕರಾರು ಪತ್ರ ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತತಾರೆ. 6 ಕೋಟಿ 75 ಲಕ್ಷದ ಕರಾರು ಪತ್ರ ಮಾಡಿಕೊಡುವ 3 ತಿಂಗಳ ಮುಂಚೆ ಮಾಡಲಾಗಿರುತ್ತದೆ. ರೂ. 4 ಕೋಟಿ 40 ಲಕ್ಷ ಕ್ರಯ ಪತ್ರದ ಶೀರ್ಷಿಕೆಯಲ್ಲಿ ಮೂಲಿ ಹಕ್ಕಿನ ಸ್ದಿರಾಸ್ತಿ, ಅದರಲ್ಲಿರುವ 1784.37 ಚದರ ಮೀ ವಿಸ್ತೀರ್ಣದ ವಸತಿ, ವಾಣಿಜ್ಯ ಸಂಕೀರ್ಣ ಹಾಗೂ ಅದರಲ್ಲಿ ಪೀಠೋಪಕರಣಗಳು ಮತ್ತು ಜೋಡಣೆಗಳ ಕುರಿತು ಕಂಡಿತ ಕ್ರಯ ಸಾಧನೆ ಎಂದು ಇದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

5. ನಮ್ಮ ಹೋಟೆಲ್ ನ ವಿಸ್ತೀರ್ಣ 1784.37 ಚದರ ಮೀ ವಿಸ್ತೀರ್ಣ ಎಂದರೆ ಸಾಕ್ಷಿ ಈಗ ನನಗೆ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಹೋಟೇಲ್ ವಿಸ್ತೀರ್ಣ 1784.37 ಚದರ ಮೀಟರ್ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನೋಂದಾಯಿತ ಕ್ರಯ ಪತ್ರದ ಒಕ್ಕಣೆ ಬಗ್ಗೆ ನನಗೆ ಯಾವುದೇ ತಕರಾರು ಇಲ್ಲ, ನನಗೆ ಬರುವ 6 ಕೋಟಿ 75 ಲಕ್ಷದ ಬಗ್ಗೆ ಮಾತ್ರ ತಕರಾರು ಎಂದು ನುಡಿಯುತ್ತಾರೆ. ನಾನು ಮಾರಾಟ ಮಾಡಿದ ಕಟ್ಟಡದ ಸಂಖ್ಯೆ 354 ಪಿ 2 1 ಆಗಿರುತ್ತದೆ. ಅದು ಕೋಟೇಶ್ವರದ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುತ್ತದೆ. ಅದಕ್ಕೆ ಅವರು ಬಾಗಿಲು ಸಂಖ್ಯೆ ನೀಡಿರುತ್ತಾರಾ ಎಂದರೆ ಸಾಕ್ಷಿ ಅದೇ ಡೋರ್ ನಂಬರ್ ಎಂದು ನುಡಿಯುತ್ತಾರೆ. ಕ್ರಯ ಪತ್ರದಲ್ಲಿ ಮಾರಾಟ ಮಾಡಿದ ವಸ್ತುಗಳ ಸವಿವರ ಇರುತ್ತದೆ ಎಂದರೆ ಸರಿ.

6. ಕ್ರಯ ಪತ್ರದಲ್ಲಿ ವರ್ಣಿಸಿರುವ ಸ್ಥಿರಾಸ್ತಿಯ ವಿವರ ಲಾಡ್ಜ್ ಎಸಿ ರೂಮ್ ಹಾಲ್, ಬಾರ್ ಆ್ಯಂಡ್ ರೆಸ್ಟೋರೆಂಟ್ ಎಲ್ಲಾ ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ಕ್ರಯ ದಸ್ತಾವೇಜಿನಲ್ಲಿ ಆರೋಪಿತಳಿಂದ ಹಣ ಬರುವುದು ಬಾಕಿ ಇದೆ ಎಂದು ನಮೂದು ಇರುವುದಿಲ್ಲ. ಕ್ರಯ ದಸ್ತಾವೇಜಿನಲ್ಲಿ 6 ಕೋಟಿ 75 ಲಕ್ಷದ ನಮೂದು ಇರುವುದಿಲ್ಲ ಎಂದರೆ ಸರಿ. ನೋಂದಾಯಿತ ಕ್ರಯ ದಸ್ತಾವೇಜಿನ ಪೂರ್ವದಲ್ಲಿ ಮಾತುಕತೆ ಆಗಿ ಆರೋಪಿತಳು 4 ಕೋಟಿ 40 ಲಕ್ಷ ಬಿಳಿಯ ಹಣವನ್ನು ಹಾಗೂ ಉಳಿದ ಹಣಕ್ಕೆ ಕಪ್ಪು ಹಣವನ್ನು ಕೊಡುತ್ತೇನೆ ಎಂದು ಮಾತುಕತೆ ಆಗಿದೆ ಎಂದು ನುಡಿಯುತ್ತಾರೆ. ಈ ವಿಚಾರವನ್ನು ವಕೀಲರಿಗೆ ತಿಳಿಸಿರುತ್ತೀರಾ ಎಂದರೆ ಸಾಕ್ಷಿ

ಸಂತೋಷ ಕುಮಾರ್  ರವರೇ ಈ ವಿಚಾರ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. 2016 ರಿಂದ ಆದಾಯ ತೆರಿಗೆಯನ್ನು ನಾನು ಕಟ್ಟುತ್ತೀರುತ್ತೇನೆ.

7.  ನನಗೆ ತೆರಿಗೆ ಸಲಹೆದಾರರು ಸುಧೀರ್ ಅಡಿಗರು ಕುಂದಾಪುರ ಇವರು ಇರುತ್ತಾರೆ. ಕೋಟಿಗಟ್ಟಲೆ ವ್ಯವಹಾರ  ಮಾಡಿದ ಬಗ್ಗೆ  ಸದರಿ ಆದಾಯ ತೆರಿಗೆಯಲ್ಲಿ ಕಾಣಿಸುತ್ತಿದೆಯಾ ಎಂದರೆ ಸಾಕ್ಷಿ ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿ 2020 ರ ಆದಾಯ ತೆರಿಗೆಯ ಪಾವತಿಯಲ್ಲಿ  ಕಂಡು ಬರುತ್ತದೆ ಎಂದು ನುಡಿಯುತ್ತಾರೆ.  ಆದಾಯ ತೆರಿಗೆ ಸಲಹೆಗಾರರಿಗೆ 4 ಕೋಟಿ 40 ಲಕ್ಷ ಬಿಳಿಯ ಹಣ 3 ಕೋಟಿ 35 ಲಕ್ಷ ಕಪ್ಪು ಹಣ ಎಂದು ತಿಳಿಸಿರುತ್ತೇನೆ. ಕಪ್ಪು ಹಣದ ಬಗ್ಗೆ ಯಾವಾ ವರ್ಷದ ಆದಾಯ ತೆರಿಗೆಯಲ್ಲಿ ಕಾಣುತ್ತದೆ ಎಂದರೆ ಸಾಕ್ಷಿ ನೆನಪು ಮಾಡಿ ಹೇಳಬೇಕು ಎಂದು ನುಡಿಯುತ್ತಾರೆ.  ಆದಾಯ ತೆರಿಗೆ  ಪಾವತಿ ರಶೀದಿಗಳು ನನ್ನ ಬಳಿ ಇರುವುದಿಲ್ಲ.  ನೋಂದಾಯಿತ ಕ್ರಯ ಪತ್ರದಲ್ಲಿ ಕಪ್ಪು ಹಣದ ಬಗ್ಗೆ ನಮೂದಿಸಿರುವುದಿಲ್ಲ. ಕರಾರು ಪತ್ರದಲ್ಲಿ ನಮೂದು ಇದೆ ಎಂದು ನುಡಿಯುತ್ತಾರೆ.

8. ಕಪ್ಪು ಹಣಕ್ಕೆ ಸಂಬಂಧಪಟ್ಟಂತೆ ನಿ.ಪಿ.1  ಕೊಡಲಾಗಿರುತ್ತದೆ. ಕಪ್ಪು ಹಣ ಏನು ಎಂದು ನನಗೆ ಗೊತ್ತಿರುವುದಿಲ್ಲ.  ಕಪ್ಪು ಹಣ ಪಡೆದುಕೊಳ್ಳುವುದು ಕಾನೂನು ಬಾಹಿರ ಎಂದು ನನಗೆ ಗೊತ್ತಿರುವುದಿಲ್ಲ.  ದೂರನ್ನು ಹಾಕುವಾಗ ಕಪ್ಪು ಹಣದ ಬಗ್ಗೆ ಚೆಕ್ ಎಂದು ವಕೀಲರಿಗೆ ತಿಳಿಸಿರುತ್ತೇನೆ. ಕ್ರಯ ಪತ್ರವನ್ನು ಈ ಪ್ರಕರಣದಲ್ಲಿ ಹಾಜರು ಪಡಿಸಿರುತ್ತೇನೆ. ಕಳೆದ ಬಾರಿ ಸಾಕ್ಷಿ ಹೇಳುವಾಗ ಅದನ್ನು ನಾನು ನೋಡಿದ ಬಗ್ಗೆ  ನೋಡಿರುವುದಿಲ್ಲ, ಸಾಕ್ಷಿ ವಕೀಲರ ಬಳಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ.  ಸ್ಥಿರಾಸ್ತಿ ಗಂದರ್ವ ಬಾರ್ ಸರ್ವೆ ನಂಬರ್ 354/4/ಬಿ/1  ಕೋಟೇಶ್ವರ ಗ್ರಾಮ, ಕುಂದಾಪುರ ತಾಲೂಕು ಇರುತ್ತದೆ. ವಿಸ್ತೀರ್ಣ  36.66 ಸೆಂಟ್ಸ್ ಎಂದರೆ ಸರಿ.  1483.57 ಚದರ ಮೀ  ಎಂದರೆ  ಸಾಕ್ಷಿ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ.  ಕ್ರಯ ಪತ್ರದಲ್ಲಿ ಕಾಣಿಸಿದ ಚತುರ್ಗಡಿ ಸರಿ ಇರುತ್ತದೆ ಎಂದರೆ ಸರಿ.

9. ಜಮೀನು  ಕಟ್ಟಡ ಹಾಗೂ ಅದಕ್ಕೆ ಹೊಂದಿಕೊಡಂತಹ ಪಿಠೋಪಕರಣಗಳಿಗೆ ಸಂಬಂದಪಟ್ಟಂತೆ 4 ಕೋಟಿ 40 ಲಕ್ಷ ಸಂಪೂರ್ಣ ಸಂದಾಯ ಆಗಿರುತ್ತದೆ ಎಂದು ಕ್ರಯ ಪತ್ರದಲ್ಲಿ ನಮೂದು ಇದೆ ಎಂದರೆ ಸರಿ. ಮೇಲೆ ಹೇಳಿದ ಎಲ್ಲಾ ಆಸ್ತಿಯನ್ನು ಆರೋಪಿತಳ ಸ್ವಾಧಿನ ಅನುಭವ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ 6 ಕೋಟಿ 75  ಲಕ್ಷಕ್ಕೆ  ಕ್ರಯ ಕೊಡುವುದಾಗಿ ಮಾತುಕತೆಯಾಗಿ 4  ಕೋಟಿ 40 ಲಕ್ಷ  ಹಣ ಪಡೆದು  ಕರಾರು ಪತ್ರದಂತೆ ಉಳಿದ ಹಣಕ್ಕೆ ಚೆಕ್ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.3 ಕೋಟಿ 75 ಲಕ್ಷದ ಚೆಕ್ ಬಗ್ಗೆ ನೊಂದಾಯಿತ ಕ್ರಯ ಪತ್ರದಲ್ಲಿ ನಮೂದು ಇಲ್ಲ ಎಂದರೆ ಸರಿ.  4 ಕೋಟಿ 40 ಲಕ್ಷಕ್ಕೆ

ವ್ಯವಹಾರ ಮುಗಿದ ನಂತರ ಆರೋಪಿತಳು ನನಗೆ ಚೆಕ್ ಕೊಡುವ ಪ್ರಮೇಯ ಬರುವುದಿಲ್ಲ ಹಾಗೂ ಹಣ ಕೊಡುವುದು ಬಾಕಿ ಇರುವುದಿಲ್ಲ ಎಂದರೆ ಸಾಕ್ಷಿ ಹಣ ಕೊಡುವುದು ಬಾಕಿ ಇರುತ್ತದೆ ಎಂದು ನುಡಿಯುತ್ತಾರೆ. ಕೊನೆಯ ಬಾರಿಗೆ ಯಾವಾಗ ಆದಾಯ ತೆರಿಗೆ ಪಾವತಿಸಿರುತ್ತೇನೆ ಎಂದು ನೆನಪಿರುವುದಿಲ್ಲ.

10. ಆರೋಪಿತಳ ಪರಿಚಯ ಇರುವುದಿಲ್ಲ. ಪ್ರಥಮವಾಗಿ ಆರೋಪಿತಳನ್ನು ಯಾವಾಗ ನೋಡಿದ್ದೇನೆ ಎಂದು ನೆನಪಿಲ್ಲ. ಬೇರೆಯವರ ಮುಖಾಂತರ ಮಾರಾಟ ಮಾಡುವ ಸಲುವಾಗಿ ಪರಿಚಯ ಆಗಿರುತ್ತಾರೆ ಎಂದು ನುಡಿಯುತ್ತಾರೆ. ಡಿಸೆಂಬರ್ 2022 ರಲ್ಲಿ ಪ್ರಥಮವಾಗಿ ಪರಿಚಯ ಆಗಿರುತ್ತಾರೆ. ಅವರಿಗೆ ಪಿಠೋಪಕರಣ , ಸಭಾಗೃಹ ಎಲ್ಲಾವನ್ನು ತೋರಿಸಿಯೇ ಅವರಿಗೆ ಮಾರಾಟ ಮಾಡಿರುತ್ತೇನೆ. ಕರಾರು ಪತ್ರವನ್ನು ನೋಂದಣಿ ಮಾಡಿರುವುದಿಲ್ಲ. ನೋಟರಿ ಮಾಡಿರುವುದಿಲ್ಲ.

11. ಕರಾರು ಪತ್ರ ಮಾಡುವಾಗ ಹೋಟೆಲ್ ನ್ನು ನಾನೇ ನಡೆಸುತ್ತಿದ್ದೆ. ಆರೋಪಿತಳ ಮಗ ಹಾಗೂ ಗಂಡ ಬಂದಿರುತ್ತಾರೆ. ಮಗನ ಹೆಸರು ಶರತ್ ಶೆಟ್ಟಿ ಇರುತ್ತದೆ. ಕ್ರಯ ಮಾಡುವ ಮಧ್ಯದಲ್ಲಿ ಸದರಿಯವರು ಹೋಟೆಲ್ ಗೆ ಬಂದಿದ್ದಾರೋ ಎಂದು ಗೊತ್ತಿರುವುದಿಲ್ಲ. ಕ್ರಯಕ್ಕೆ ಮಧ್ಯಸ್ಥರು ಅಂತ ಇದ್ದರು. ನಮ್ಮ ಹೋಟೆಲ್ ನ ಪಕ್ಕದಲ್ಲಿರುವವರು ಸೆಟ್ಲಮೆಂಟ್ ಮಾಡಿಸುತ್ತೇನೆ ಎಂದು ಸಮಯ ತೆಗೆದುಕೊಂಡಿದ್ದರು ಎಂದು ನುಡಿಯುತ್ತಾರೆ. ಆರೋಪಿತಳ ಮನೆ ಎಲ್ಲಿ ಇರುತ್ತದೆ ಎಂದು ನಾನು ನೋಡಿರುವುದಿಲ್ಲ. ಸಾಕ್ಷಿ ನನಗೆ ಅದರ ಅಗತ್ಯ ಇರುವುದಿಲ್ಲ ಎಂದು ನುಡಿಯುತ್ತಾರೆ. 6 ಕೋಟಿ 75 ಲಕ್ಷ ವ್ಯವಹಾರ ಮಾಡುವಾಗ ನನ್ನ ಆಸ್ತಿಯ ಬಗ್ಗೆ ಕಟ್ಟಡದ ಬಗ್ಗೆ ಪೀಠೋಪಕರಣಗಳ ಬಗ್ಗೆ ನಾನು ಉತ್ಪ್ರೇಕ್ಷವಾಗಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಅವರು ನೋಡಿ ತೆಗೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಅವರಿಗೆ ತಪ್ಪು ಮಾಹಿತಿ ನೀಡಿರುತ್ತೇನೆ ಎಂದರೆ ಸಾಕ್ಷಿ ಅವರು ನೋಡಿ ತೆಗೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

12. 6 ಕೋಟಿ 75 ಲಕ್ಷ ಅಂತ ವ್ಯವಹಾರ ಆದಾಗ ಪ್ರತಿಫಲದ ಮುಂಗಡ ಎಂದು 10 ಲಕ್ಷ ರೂ. ಮುಂಗಡ ಕೊಟ್ಟಿದ್ದರು. ಕ್ರಯ ಪತ್ರ ಆಗುವ 1 ವಾರದ ಮುಂಚೆ 4 ಕೋಟಿ 40 ಲಕ್ಷ ಕೊಟ್ಟಿರುತ್ತಾರೆ. ಉಳಿದ ಹಣಕ್ಕೆ ಚೆಕ್ ಕೊಟ್ಟಿರುತ್ತಾರೆ. ಆರೋಪಿತಳು ಹೋಟೆಲ್‌ನೆಲ್ಲಾ ನೋಡಿ ಸದರಿ ಹೋಟೆಲ್ ನ ಮಾರುಕಟ್ಟೆ ಬೆಲೆ 4 ಕೋಟಿ 40 ಲಕ್ಷ ಆಗುತ್ತದೆ ಎಂದು ಹೇಳಿದ್ದರಿಂದ ನಾನು 4 ಕೋಟಿ 40 ಲಕ್ಷಕ್ಕೆ ಕ್ರಯ ಪತ್ರ ಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಮಾರಾಟ ಮಾಡಿದಂತಹ ಜಮೀನು ಕಟ್ಟಡ,ಪಿಠೋಪಕರಣಗಳ ಬೆಲೆ 4

ಕೋಟಿ 40 ಲಕ್ಷ ಎಂದರೆ ಸಾಕ್ಷಿ ಅವರೇ ನೋಡಿ ವ್ಯವಹಾರ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಕಪ್ಪು ಹಣ ಕೊಡುತ್ತೇನೆ ಎಂದು ಆರೋಪಿತಳು ಹೇಳಿರುವುದಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಆಕೆಯೇ ಚೆಕ್ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

13. ಆರೋಪಿತಳು ನಮ್ಮನ್ನು ಬಂದು ಬೇಟಿ ಆದ ನಂತರ ಬೆಳಗಾಮಿನ ಖಾನಾಪುರದ ಶಿವಾಜಿನಗರದಲ್ಲಿರುವ ಆರೋಪಿತಳ ವಾಸ್ತವ್ಯದ ಮನೆಗೆ ಪದೆ ಪದೇ ಹೋಗಿದ್ದೇನೆ ಎಂದರೆ ಸಾಕ್ಷಿ ಹಣ ಕೇಳಲು ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ಕ್ರಯ ಪತ್ರ 3.30 ಗಂಟೆಗೆ ನೋಂದಣಿ ಆಗಿರಬಹುದು. ಕರಾರು ಪತ್ರವನ್ನು ಎಷ್ಟು ಗಂಟೆಗೆ ಮಾಡಿದ್ದೇನೆ ಎಂದು ನೆನಪಿರುವುದಿಲ್ಲ. ನಿ.ಪಿ.7 ನ್ನು ಸಬ್ ರಿಜಿಸ್ಟ್ರಾರ್, ಕುಂದಾಪುರದ ಕಚೇರಿಯಲ್ಲಿ ನೋಂದಣಿ ಮಾಡಿರಬೇಕು. ಅದಕ್ಕೆ ಸಾಕ್ಷಿದಾರರ ಯಾರು ಎಂದು ನೆನಪಿರುವುದಿಲ್ಲ. ನಿ.ಪಿ.7 ಕ್ಕೆ ಬಾವಚಿತ್ರ ಲಗತ್ತಿಸಿರಬಹುದು, ನನಗೆ ನೆನಪಿರುವುದಿಲ್ಲ. ನಿ.ಪಿ.7 ನೋಂದಣಿ ಮಾಡಿಸಿರುತ್ತೇನೆ. ನಿ.ಪಿ.7 ರ ಕರಾರು ಪತ್ರವನ್ನು ಸುಳ್ಳು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ.7 ರಲ್ಲಿರುವ ಸಹಿ ಆರೋಪಿತಳದ್ದಲ್ಲ ಎಂದರೆ ಸಾಕ್ಷಿ ಅದಕ್ಕೆ ನನಗೆ ಸಂಬಂಧ ಇರುವುದಿಲ್ಲ, ಹಣ ಕೊಡುವುದು ಬಾಕಿ ಇರುವುದಕ್ಕೆ ಚೆಕ್ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

14. ನಿ.ಪಿ.7 ಕರಾರು ಪತ್ರವನ್ನು ಆರೋಪಿತಳು ಮಾಡಿಕೊಡುತ್ತೇನೆ ಎಂದು ಹೇಳಿದ್ದಿಲ್ಲ ಹಾಗೂ ಮಾಡಿಕೊಟ್ಟಿದ್ದಿಲ್ಲ ಎಂದರೆ ಸರಿಯಲ್ಲ. ಆ ಕಾರಣದಿಂದ ಈ ಕರಾರಿನ ಬಗ್ಗೆ ಮಾಹಿತಿ ಇಲ್ಲ ಎಂದರೆ ಸಾಕ್ಷಿ ಸಮ್ಮನಿರುತ್ತಾರೆ. ನಾನು ಬೆಳಗಾಮಿಗೆ ಹೋದಾಗ ಚೆಕ್‌ನ್ನು ಲಪಾಟಾಯಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಚೆಕ್ ನಲ್ಲಿರುವ ಒಂದು ರೂಪಾಯಿಯನ್ನು ಅವರು ಕೊಡಲು ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ನನಗೆ ಹಣ ಕೊಡಲು ಬಾಕಿ ಇರುತ್ತದೆ ಎಂದು ನುಡಿಯುತ್ತಾರೆ. 3 ಕೋಟಿ 50 ಲಕ್ಷ ವನ್ನು ಹೋಟೆಲ್ ಮಾರಾಟ ಮಾಡಿದ್ದಕ್ಕೆ ಸಂಬಂಧಪಟ್ಟಂತೆ ಬಾಕಿ ಇರುತ್ತದೆ ಎಂದು ನುಡಿಯುತ್ತಾರೆ. ಸರ್ಕಾರಕ್ಕೆ ಮುದ್ರಾಂಕ ಇಲಾಖೆ, ಆದಾಯ ತೆರಿಗೆ ಇಲಾಖೆಗೆ ವಂಚಿಸಬಾರದೆಂದು ಜ್ಞಾನ ಇರುತ್ತದೆ. ನನ್ನ ತೆರಿಗೆ ಸಲಹೆಗಾರರು ಕಪ್ಪು ಹಣ ಕಾನೂನು ಬಾಹಿರ ಎಂದು ತಿಳಿಸಿರುತ್ತಾರೆ.

ಈ ಸಂದರ್ಭದಲ್ಲಿ ಆರೋಪಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.

ಓ.ಹೇ.ಕೇ.ಸ.ಇದೆ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ